# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 387

ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ: : 23.09.2020

ಉತ್ತರಿಸುವ ಮಾನ್ಯ ಸಚಿವರು : ಮಾನ್ಯ ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2020-21ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆಯೆ; | ಹೌದು, 2020-21ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br><br>Yes. Crop Survey programme is under progress during Kharif 2020-21. |
| ಆ) | ಬೆಳೆ ಸಮೀಕ್ಷೆ ಕಾರ್ಯದ ಮಾರ್ಗಸೂಚಿಗಳೇನು/ (ವಿವರ ನೀಡುವುದು) | ಬೆಳೆ ಸಮೀಕ್ಷೆ ಕಾರ್ಯದ ಮಾರ್ಗಸೂಚಿಗಳು:<br>1. ಸಿಆಸುಇ (ಇ-ಆಡಳಿತ) ರವರು ಅಭಿವೃದ್ಧಿ ಪಡಿಸಿರುವ ಮಾರ್ಪಡಿಸಿದ ಮೊಬೈಲ್ ಆಪ್ ಬಳಸಿಕೊಂಡು ರೈತರು ಬೆಳೆ ಸಮೀಕ್ಷೆಯನ್ನು ಮಾಡುವರು;<br>2. ರೈತರೇ ಸ್ವತಃ ತಮ್ಮ ಜಮೀನುಗಳಲ್ಲಿ (ಹಿಸ್ಸಾವಾರು) ತಾವು ಬೆಳೆದ ಬೆಳೆಗಳ ಮಾಹಿತಿಯನ್ನು ಛಾಯಾಚಿತ್ರ ಸಹಿತ ತಮ್ಮ ಮೊಬೈಲ್ ಆ್ಯಪ್‌ನಲ್ಲಿ ನಿಗದಿತ ಸಮಯದಲ್ಲಿ ಅಪ್ಲೋಡ್ ಮಾಡುವರು;<br>3. ರೈತರು ನಿಗದಿತ ಸಮಯದೊಳಗೆ ತಾವು ಬೆಳೆದ ಬೆಳೆಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗದೇ ಇದ್ದ ಪಕ್ಷದಲ್ಲಿ ರೈತರ ಪರವಾಗಿ ಅವರ ಬಂಧುಗಳು/ಸ್ನೇಹಿತರು ಖಾಸಗಿ ನಿವಾಸಿಗಳ ಸಹಾಯದಿಂದ ತಮ್ಮ ಜಮೀನುಗಳ ಬೆಳೆ ಮಾಹಿತಿಯನ್ನು ಛಾಯಚಿತ್ರದೊಂದಿಗೆ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್‌ನಲ್ಲಿ ಅಪ್ಲೋಡ್ ಮಾಡುವರು;<br>4. ಒಂದು ಪಕ್ಷ ಮೇಲಿನ ಎರಡು ಚಟುವಟಿಕೆಗಳು ಆಗದಿದ್ದಲ್ಲಿ ಖಾಸಗಿ ನಿವಾಸಿಗಳು ಮತ್ತು ಸರ್ಕಾರದ ಸಿಬ್ಬಂದಿಯು ಬೆಳೆ ಸಮೀಕ್ಷೆಯನ್ನು ಕೈಗೊಳ್ಳುವರು;<br>5. ಬೆಳೆ ಸಮೀಕ್ಷೆ ಪ್ರಾರಂಭವಾಗುವ ಮುನ್ನ ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಸ್ಥಳೀಯ ಜನಪ್ರತಿನಿಧಿಗಳು, ರೈತ ಮುಖಂಡರು, ಮಾಧ್ಯಮ ಪ್ರತಿನಿಧಿಗಳನ್ನು ಒಳಗೊಂಡಂತೆ, ಕೃಷಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಪ್ರಚಾರ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸುವರು;<br>6. ಬೆಳೆ ಸಮೀಕ್ಷೆ ಕೈಗೊಳ್ಳುವ ಖಾಸಗಿ ನಿವಾಸಿಗಳು ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಕೆಗಳ ಜೊತೆಗೆ ಬೆಳೆ ಸಮೀಕ್ಷೆ ಯೋಜನೆಯ ಪ್ರಚಾರ, ರೈತರ ಹಕ್ಕು ಮತ್ತು ಜವಾಬ್ದಾರಿ ಹಾಗೂ ಬೆಳೆ ಸಮೀಕ್ಷೆಯ |

ಮಾಹಿತಿ/ದತ್ತಾಂಶದ ಉಪಯೋಗಗಳ ಕುರಿತು ಅವರಿಗೆ ಹಂಚಿಕೆಯಾದ ಗ್ರಾಮದಲ್ಲಿ ಉಸ್ತುವಾರಿ ಮಾಡುವರು;

7. ರೈತರು ಖಾಸಗಿ ನಿವಾಸಿಗಳ ಸಹಾಯದೊಂದಿಗೆ ಹಾಗೂ ಖಾಸಗಿ ನಿವಾಸಿಗಳೇ ಸ್ವತಃ ಬೆಳೆ ಸಮೀಕ್ಷೆ ಮಾಡಿ ಬೆಳೆ ಸಮೀಕ್ಷೆ ಆಪ್ ನಲ್ಲಿ ಅಪ್‌ಲೋಡ್ ಮಾಡಿದ ಪ್ರತಿ ತಾಕಿನ ಛಾಯಾಚಿತ್ರ ಮತ್ತು ಬೆಳೆ ವಿವರಗಳಿಗೆ ಸಂಬಂಧಿಸಿದಂತೆ ಮೊದಲ ಬೆಳೆಗೆ ರೂ. 10/- ಗಳನ್ನು ಮತ್ತು ತಾಕಿನಲ್ಲಿ ಇರುವ ಪ್ರತಿ ಹೆಚ್ಚುವರಿ ಬೆಳೆಯ ಛಾಯಾಚಿತ್ರವನ್ನು ತೆಗೆದು ವಿವರಗಳನ್ನು ಅಪ್‌ಲೋಡ್ ಮಾಡಲು ಪ್ರತಿ ಹೆಚ್ಚುವರಿ ಬೆಳೆಗೆ 5/-ರಂತೆ ಗರಿಷ್ಠ ರೂ.20/-ರ ಮಿತಿಯಲ್ಲಿ ಖಾಸಗಿ ನಿವಾಸಿಗಳಿಗೆ ಪಾವತಿಸಲಾಗುವುದು;
8. ಖಾಸಗಿ ನಿವಾಸಿಗಳಿಗೆ ಮಾಡಲಾಗುವ ಎಲ್ಲಾ ಪಾವತಿಗಳನ್ನು ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡುವುದು.
9. ಸರ್ಕಾರಿ ಸಿಬ್ಬಂದಿಗಳು ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಂಡಲ್ಲಿ ಒಂದು ದಿನದಲ್ಲಿ 50 ಕ್ಕೂ ಹೆಚ್ಚಿನ ತಾಕುಗಳನ್ನು ಬೆಳೆ ಸಮೀಕ್ಷೆ ಮಾಡುವ ಸರ್ಕಾರಿ ಸಿಬ್ಬಂದಿಗಳಿಗೆ **50** ರ ಮೇಲ್ಪಟ್ಟ ತಾಕುಗಳಿಗೆ ಮಾತ್ರಮೇಲಿನ ಕಂಡಿಕೆಯಂತೆ ಗೌರವಧನವನ್ನು ಪಾವತಿಸಲಾಗುವುದು;

Guidelines for Crop Survey 2020-21

1. Crop Survey to be done using the modified Farmer mobile app developed by DPAR (e- Governance);
2. Capturing and uploading of hissa wise crops grown data and photos by farmer himself in specified time;
3. If Farmer cannot upload the details in specified time, then the crop information should be captured and upload by farmers relatives/Friends on his behalf and with the help of local Private Residents (PR's);
4. If both farmer and farmers relatives/Friends on his behalf fail to upload the crop details, local private residents and Government officials to do the Crop Survey;
5. Wide publicity should be given by compulsorily involving all Local representatives, Farmer leaders, Media persons and Agriculture and allied departments Heads starting from Village level to State level;
6. PR's have to conduct Information, Education & Communication (IEC) activities in his jurisdiction and educate the farmers about the importance and uses of the crop survey data and to hand hold farmers to do the crop survey by themselves;

| | | |
|---|---|---|
| | | 7. Crop survey carried by Farmers himself or with the help of local PR's, in both the cases the PR will be paid Rs.10/- for the first crop and Rs.5/- for every additional crop upto a maximum limit of Rs.20/plot;<br>8. All PR related payments has to be done through Aadhar linked Bank payment;<br>9. If Crop Survey is carried out by Government Officials in more than 50 plots per day, honorarium will be paid for plots surveyed more than 50 as fixed to PR's; |
| ಇ) | ಯಾರಿಂದ ಸಮೀಕ್ಷೆ ನಡೆಸಲಾಗುತ್ತಿದೆ; (ವಿವರ ನೀಡುವುದು) | ಪ್ರಸ್ತುತ ಸಾಲಿನಲ್ಲಿ ಬೆಳೆ ಸಮೀಕ್ಷೆಯನ್ನು ಸ್ವತಃ ರೈತರು; ರೈತರ ಪರವಾಗಿ ಖಾಸಗಿ ನಿವಾಸಿಗಳು ಮತ್ತು ಸರ್ಕಾರಿ ಅಧಿಕಾರಿಗಳಿಂದ ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ.<br><br>Crop Survey is under implementation during 2020-21 by Farmers themselves, on behalf of Farmers, local Private Residents and Government Officials'. |
| ಈ) | ಇದುವರೆವಿಗೂ ಬೆಳೆ ಸಮೀಕ್ಷೆಯನ್ನು ಯಾವ ಪ್ರಮಾಣದಲ್ಲಿ ಮಾಡಲಾಗಿದೆ; | 2020–21ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಇಲ್ಲಿಯವರೆಗೆ (ದಿ:21-09-2020) ಶೇ.59.76 ರಷ್ಟು ತಾಕುಗಳಲ್ಲಿ (1,26,54,715) ಬೆಳೆ ಸಮೀಕ್ಷೆಯನ್ನು ಮಾಡಲಾಗಿದೆ.<br><br>59.76% of Crop Survey (1,26,54,715 Plots) is carried out till 21.09.2020 during Kharif 2020-21. |
| ಉ) | 2019–20ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯನ್ನು ಯಾರಿಂದ ಮಾಡಿಸಲಾಯಿತು; ಯಾವ ಅವಧಿಯೊಳಗೆ ಎಷ್ಟು ಪ್ರಮಾಣದ ಬೆಳೆ ಸಮೀಕ್ಷೆಯನ್ನು ಮಾಡಿಸಲಾಗಿದೆ; ಬೆಳೆ ಸಮೀಕ್ಷೆ ಪ್ರಕಾರ ಯಾವ ಯಾವ ಬೆಳೆಗೆ ಎಷ್ಟು ಮಂದಿ ರೈತರಿಗೆ ಯಾವ ಯಾವ ರೂಪದ ಪರಿಹಾರವನ್ನು ನೀಡಲಾಗಿದೆ; (ಪ್ರತ್ಯೇಕವಾಗಿ ಪೂರ್ಣ ವಿವರ ನೀಡುವುದು) | 2019–20ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯನ್ನು, ತಂತ್ರಾಂಶದ ಜ್ಞಾನವುಳ್ಳ ಸ್ಥಳೀಯ ಯುವಕರ (ಖಾಸಗಿ ನಿವಾಸಿಗಳು) ಸಹಾಯದಿಂದ ಮತ್ತು ಸರ್ಕಾರಿ ಅಧಿಕಾರಿಗಳಿಂದ ಬೆಳೆ ಸಮೀಕ್ಷೆ ಮಾಡಿಸಲಾಯಿತು.<br><br>ವಿವಿಧ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆ ಮಾಡಿರುವ ಪ್ರಮಾಣ ಈ ಕೆಳಗಿನಂತಿದೆ.<br><br>ಪೂರ್ವ ಮುಂಗಾರು– 3687864 ತಾಕುಗಳು<br>ಮುಂಗಾರು – 18686233 ತಾಕುಗಳು<br>ಹಿಂಗಾರು – 10950609 ತಾಕುಗಳು<br>ಬೇಸಿಗೆ – 2286794 ತಾಕುಗಳು<br><br>2019–20ನೇ ಸಾಲಿನ ಬೆಳೆ ಸಮೀಕ್ಷೆ ದತ್ತಾಂಶವನ್ನು ಬಳಸಿಕೊಂಡು ಈ ಕೆಳಗಿನ ಯೋಜನೆಗಳಡಿ ರೈತರಿಗೆ ಪರಿಹಾರವನ್ನು ನೀಡಲಾಗಿದೆ. |
| | | ಅ) ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಬೆಳೆ ಸಮೀಕ್ಷೆ ದತ್ತಾಂಶ ಉಪಯೋಗಿಸಿ, 2019–20 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 1.34 ಲಕ್ಷ ರೈತ ಫಲಾನುಭವಿಗಳಿಗೆ ಒಟ್ಟು ರೂ.235.93 |

ಕೋಟಿಗಳು ಬೆಳೆ ವಿಮೆ ಪರಿಹಾರ ಮೊತ್ತ ಲೆಕ್ಕ ಹಾಕಲಾಗಿದ್ದು, ವಿಮಾ ಸಂಸ್ಥೆಯವರಿಂದ ಬೆಳೆ ವಿಮೆ ಪರಿಹಾರ ಮೊತ್ತ ಇತ್ಯರ್ಥ ಕಾರ್ಯ ಪ್ರಗತಿಯಲ್ಲಿರುತ್ತದೆ.

ಬೆಳೆವಾರು ವಿಮಾ ನಷ್ಟ ಪರಿಹಾರ ಲೆಕ್ಕಹಾಕಿರುವ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಎರಡನೇ ಹಂತದಲ್ಲಿ, ಉಳಿದ ಪ್ರಸ್ತಾವನೆಗಳಿಗೆ ದಿನಾಂಕ:11.09.2020 ರಂದು ಕೇಂದ್ರ ಸರ್ಕಾರದಿಂದ ನೀಡಿರುವ ವಿನಾಯಿತಿಗಳನ್ನು ಅಳವಡಿಸಿಕೊಂಡು ಬೆಳೆ ವಿಮೆ ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಸದರಿ ಪ್ರಕ್ರಿಯೆಯು ಪೂರ್ಣಗೊಂಡ ಕೂಡಲೇ ಬಾಕಿ ಇರುವ ಪ್ರಸ್ತಾವನೆಗಳಿಗೆ ಕ್ಲೇಮುಗಳನ್ನು ಪ್ರಾರಂಭ ಮಾಡಲಾಗುವುದು.

ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆಯ ದಾಖಲೆಯ ವಿವರಗಳು ಅಂತಿಮ ಹಂತದ ಕ್ರೂಡೀಕರಣ ಪ್ರಕ್ರಿಯೆಯು ಜಾರಿಯಲ್ಲಿದ್ದು, ಸದರಿ ದತ್ತಾಂಶವು ಅಂತಿಮಗೊಂಡ ನಂತರ ಬೆಳೆ ವಿಮೆ ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೊಂದಣಿಯಾದ ಪ್ರಸ್ತಾವನೆಗಳೊಂದಿಗೆ ತಾಳೆ ಮಾಡಲು ಪರಿಗಣಿಸಲಾಗುವುದು. ನೋಂದಣಿ ಮಾಡಿಸಿದ ರೈತರಿಗೆ ಬೆಳೆ ಕಟಾವು ಪ್ರಯೋಗಗಳ ವರದಿಯ ಆಧಾರದ ಮೇಲೆ ಬೆಳೆ ವಿಮೆ ಪರಿಹಾರವನ್ನು ಬೆಳೆ ವಿಮೆ ಸಂರಕ್ಷಣೆ ತಂತ್ರಾಂಶದಲ್ಲಿ ಪ್ರಾರಂಭ ಮಾಡಲಾಗುವುದು.

ಆ) 2019-20ನೇ ಸಾಲಿನಲ್ಲಿ ಮುಸುಕಿನ ಜೋಳ ಬೆಳೆದು ಕೋವಿಡ್-19 ರಿಂದ ಆರ್ಥಿಕ ಸಂಕಷ್ಟದಲ್ಲಿರುವ ಪ್ರತಿ ರೈತರಿಗೆ ರೂ.5000/- ರಂತೆ ಇಲ್ಲಿಯವರೆಗೆ (ದಿ:16.09.2020) 719519 ಫಲಾನುಭವಿ ರೈತರಿಗೆ ನೇರ ನಗದು ವರ್ಗಾವಣೆ ಮೂಲಕ ರೂ. 359.76 ಕೋಟಿಗಳನ್ನು ವರ್ಗಾಯಿಸಲಾಗಿದೆ.

ಇ) 2019-20ನೇ ಸಾಲಿನ ಬೆಳೆ ಸಮೀಕ್ಷೆ ದತ್ತಾಂಶವನ್ನು ಬಳಸಿಕೊಂಡು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 581896 ರೈತ ಫಲಾನುಭವಿಗಳಿಂದ ರೂ. 3164.27 ಕೋಟಿ ಮೌಲ್ಯದ ಬೆಳೆ/ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದೆ. ಬೆಳೆ ವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಈ) 2019-20ನೇ ಸಾಲಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆದು (ತರಕಾರಿ/ಹೂವು/ಹಣ್ಣುಗಳು) ಕೋವಿಡ್-19 ರಿಂದ ಸಂಕಷ್ಟಕ್ಕೊಳಗಾದ ಫಲಾನುಭವಿಗಳ ವಿವರಗಳನ್ನು 2019-20ನೇ ಸಾಲಿನ ಬೆಳೆ ಸಮೀಕ್ಷೆ ದತ್ತಾಂಶಗಳಿಂದ ಪಡೆದು 20292 ಹೂವಿನ ಬೆಳೆ ಫಲಾನುಭವಿ ರೂ.14.50 ಕೋಟಿಗಳು, 35819 ತರಕಾರಿ ಬೆಳೆ ಫಲಾನುಭವಿ ರೂ.31.04 ಕೋಟಿಗಳು ಮತ್ತು 35959 ಹಣ್ಣಿನ ಬೆಳೆ ಫಲಾನುಭವಿ ರೂ.26.55 ಕೋಟಿಗಳು ಸೇರಿದಂತೆ ಒಟ್ಟು 92070 ಫಲಾನುಭವಿಗಳಿಗೆ ರೂ.72.09 ಕೋಟಿಗಳನ್ನು ನೀಡಲಾಗಿದೆ.

ಬೆಳೆವಾರು ವಿವರಗಳನ್ನು ಅನುಬಂಧ-3 (A, B, C)ರಲ್ಲಿ ನೀಡಲಾಗಿದೆ.

| | | |
|---|---|---|
| | | During 2019-20, Crop survey was carried out with the help of local young IT savvy residents of the village or "Private Residents"(PR's).<br><br>Crop Survey carried out during different seasons of 2019-20 is as below.<br><br>Early Kharif - 3687864 Plots<br>Kharif - 18686233 Plots<br>Rabi - 10950609 Plots<br>Summer - 2286794 Plots<br><br>Crop Survey data of 2019-20 has been used to give compensation to farmers under following schemes.<br><br>**A. Crop Insurance**: Under Karnataka Raitha Suraksha Pradhana Manthri Fasal Bima Yojana using the crop survey data, during 2019-20 Kharif in the first phase crop insurance claims were calculated for Rs.235.93 crores covering 1.34 lakh farmers. This claim settlement process is under progress by the Insurance Companies.<br><br>Crop wise claims details are given in Annexure-1.<br><br>During Second phase for the remaining proposals as on 11-09-2020 GoI has given certain exemptions to be provided after crop survey integration. As soon as this integration process in Samrakshane portal is over, for the remaining proposals claims will be initiated.<br><br>During 2019-20 Rabi season, as per crop survey data final reconciliation process is in progress. When the final reconciliation is done in Samrakshane portal for the enrolled farmers, the details will be matched with crop survey integration data and as per the crop cutting experiment results claim calculation will be initiated in Samrakshane portal.<br><br>**B. Maize**: Financial assistance of Rs.5000/- per Farmer has been given to all Farmers who have grown Maize during 2019-20 and have suffered financial losses due to Covid - 19 lock down. An amount of Rs. 359.76 crores has been transferred through DBT to 719519 Maize beneficiaries till date(Date:16.09.2020). |

| | | |
|---|---|---|
| | | **C.** Under Minimum Support Price, Rs.3164.27 Crores worth Agriculture produce has been procured from 581896 Beneficiary farmers using 2019-20 Crop Survey data.<br><br>Crop wise procurement details are given in Annexure-2.<br><br>**D**. The Farmers who have grown Horticultural Crops (Fruits/ Vegetables/ Flowers) have suffered financial losses due to Covid-19 lock down. An amount of Rs. 14.50 crores to 20292 Beneficiaries who had grown flowers, Rs. 31.04 crores to 35819 Beneficiaries who had grown Vegetables and Rs. 26.55 crores to 35959 Beneficiaries who had grown Fruits, totally Rs. 72.09 crores was given to 92070 farmer beneficiaries using 2019-20 Crop Survey data. Crop wise details are given in Annexure-3 (A, B, C). |
| ಊ) | ನೀಡಲಾದ ಪರಿಹಾರದ ಒಟ್ಟು ಮೊತ್ತವೆಷ್ಟು? | 2019–20ನೇ ಸಾಲಿನ ಬೆಳೆ ಸಮೀಕ್ಷೆ ದತ್ತಾಂಶವನ್ನು ಉಪಯೋಗಿಸಿಕೊಂಡು ಒಟ್ಟು ರೂ.431.85 ಕೋಟಿಗಳ (ಪ್ರಗತಿಯಲ್ಲಿರುವ ಬೆಳೆ ವಿಮೆ ಹೊರತುಪಡಿಸಿ) ಪರಿಹಾರವನ್ನು ನೀಡಲಾಗಿದ್ದು, ರೂ. 3164.27 ಕೋಟಿ ಮೌಲ್ಯದ ಬೆಳೆ/ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗಿದೆ.<br><br>An amount of Rs.431.85 crores(except FMFBY Scheme which is under process) has been dispersed as compensation and procured Rs.3164.27 Crores worth Agriculture produce using 2019-20 Crop survey data. |

ಸಂಖ್ಯೆ: ಕೃಇ/108/ಕೃಕೈಉ/2020

(ಬಿ.ಸಿ.ಪಾಟೀಲ್)

ಕೃಷಿ ಸಚಿವರು

| ಅನುಬಂಧ -1 | | |
|---|---|---|
| 2019-20ನೇ ಸಾಲಿನ ಮುಂಗಾರಿನ ಬೆಳೆವಾರು ಅಂದಾಜು ಪಾವತಿಸಬೇಕಾದ ಬೆಳೆ ವಿಮಾ ನಷ್ಟ ಪರಿಹಾರದ ವಿವರ | | |
| ಬೆಳೆಗಳ ಹೆಸರು | ಫಲಾನುಭವಿಗಳ ಸಂಖ್ಯೆ | ಲೆಕ್ಕಾಚಾರ ಮಾಡಲಾದ ವಿಮಾ ಪರಿಹಾರ ಮೊತ್ತ (ರೂ. ಲಕ್ಷಗಳಲ್ಲಿ) |
| ಉದ್ದು | 503 | 6.36 |
| ಎಲೆಕೋಸು | 2 | 0.24 |
| ಹತ್ತಿ | 15063 | 2895.5 |
| ಅಲಸಂದೆ | 112 | 14.88 |
| ಹೆಸರು | 2409 | 81.68 |
| ನೆಲಗಡಲೆ (ಶೇಂಗಾ) | 2389 | 482.61 |
| ಹುರುಳಿ | 0 | 0 |
| ಮುಸುಕಿನ ಜೋಳ | 66007 | 13903.51 |
| ನವಣೆ | 157 | 18.32 |
| ಈರುಳ್ಳಿ | 597 | 168.85 |
| ಭತ್ತ | 22869 | 4258.01 |
| ಸಜ್ಜೆ | 853 | 77.1 |
| ತೊಗರಿ | 8218 | 703.2 |
| ಆಲೂಗೆಡ್ಡೆ | 18 | 3.38 |
| ರಾಗಿ | 3427 | 139.69 |
| ಕೆಂಪು ಮೆಣಸಿನಕಾಯಿ | 513 | 201.81 |
| ಸಾವೆ | 0 | 0 |
| ಎಳ್ಳು | 21 | 1.56 |
| ಜೋಳ | 512 | 40.22 |
| ಸೋಯಾ ಅವರೆ | 9490 | 474.03 |
| ಸೂರ್ಯಕಾಂತಿ | 509 | 112.57 |
| ಟೊಮ್ಯಾಟೋ | 48 | 10.26 |
| ಅರಿಶಿಣ | 0 | 0 |
| ಒಟ್ಟು | 133717 | 23593.78 |

ಕೃಷಿ ನಿರ್ದೇಶಕರು

ಅನುಬಂಧ – 2

## 2019-20ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾದ ಉತ್ಪನ್ನಗಳ ವಿವರಗಳು

| ಕ್ರ.ಸಂ | ಖರೀದಿಸಲಾದ ಉತ್ಪನ್ನದ ಹೆಸರು | ಬೆಂಬಲ ಬೆಲೆ (ರೂ/ಕ್ವಿಂಟಾಲ್) | ಖರೀದಿ ಪ್ರಮಾಣ (ಕ್ವಿಂಟಾಲ್) | ಮೌಲ್ಯ (ಕೋಟಿಗಳಲ್ಲಿ) | ರೈತ ಫಲಾನುಭವಿಗಳ ಸಂಖ್ಯೆ |
|---|---|---|---|---|---|
| 1 | ಹೆಸರು | 7,050/- | 58,742 | 41.41 | 14,696 |
| 2 | ತೊಗರಿ | 5800/- + 300/- (Incentive) = 6,100/- | **30,46,844** (PSS - 22,74,986 PSF - 7,71,858) | 1,858 | 3,17,963 |
| 3 | ಶೇಂಗಾ | 5,090/- | 38,223 | 19.45 | 3,176 |
| 4 | ಕಡಲೇಕಾಳು | 4,875/- | 10,17,830 | 496.47 | 1,23,111 |
| 5 | ಭತ್ತ | ಅ. ಸಾಮಾನ್ಯ:- ರೂ. 1868/- ಆ. ಗ್ರೇಡ್ ಎ:- ರೂ. 1888/- | 6,13,796.6 | 111.77 | 27,123 |
| 6 | ರಾಗಿ | 3298 | 19,32,430.6 | 613.35 | 93,100 |
| 7 | ಬಿಳಿಜೋಳ | ಹೈಬ್ರಿಡ್:- ರೂ.2620/- ಮಾಲ್ದಂಡಿ:- 2640/- | 92,563.5 | 23.82 | 2,727 |
| | ಒಟ್ಟು | | **68,00,428** | **3164.27** | **581896** |

ಕೃಷಿ ನಿರ್ದೇಶಕರು

## ಅನುಬಂಧ-3 A-ಹೂವಿನ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮ

| ಬೆಳೆ | ಫಲಾನುಭವಿಗಳ ಸಂಖ್ಯೆ | ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| ಆರ್ಕಿಡ್ಸ್ (ಸೀತಾಳೆ) | 18 | 1.48 |
| ಆ್ಯಂಥೂರಿಯಂ | 10 | 1.17 |
| ಕನಕಾಂಬರ | 1553 | 94.54 |
| ಕಾಕಡ/ಸ್ಟಾರ್ ಜಾಸ್ಮಿನ್ | 3078 | 116.59 |
| ಕಾರ್ನೇಷನ್ | 45 | 5.64 |
| ಕಾಶಿಕಣಗಿಲೆ | 1 | 0.10 |
| ಕ್ಯಾಲ ಲಿಲ್ಲಿ | 5 | 0.19 |
| ಗುಲಾಬಿ | 6706 | 578.84 |
| ಗ್ಯೆಲಾರ್ಡಿಯಾ | 26 | 1.24 |
| ಗ್ಲಾಡಿಯೋಲಸ್ | 94 | 8.83 |
| ಚೆಂಡು ಹೂ | 1411 | 135.66 |
| ಚೈನಾ ಆ್ಯಸ್ಟರ್ (ಬಟನ್ಸ್) | 17 | 1.41 |
| ಜರ್ಬೆರಾ | 125 | 15.81 |
| ಡೇಲಿಯಾ | 1 | 0.20 |
| ಬರ್ಡ್ ಆಫ್ ಪ್ಯಾರಡೈಸ್ | 5 | 0.13 |
| ಮಲ್ಲಿಗೆ | 2763 | 117.57 |
| ಸಾಲ್ವಿಯಾ | 3 | 0.37 |
| ಸುಗಂಧರಾಜ | 780 | 62.98 |
| ಸೇವಂತಿಗೆ | 3651 | 307.01 |
| ಒಟ್ಟು | **20292** | **1449.75** |

## ಅನುಬಂಧ-3 B- ತರಕಾರಿ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮ

| ಬೆಳೆ | ಫಲಾನುಭವಿಗಳ ಸಂಖ್ಯೆ | ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| ಈರುಳ್ಳಿ | 17478 | 1704.35 |
| ಎಲೆ ಕೋಸು | 1740 | 123.86 |
| ಕುಂಬಳಕಾಯಿ | 683 | 55.13 |
| ಗಜ್ಜರಿ (ಕ್ಯಾರೆಟ್) | 544 | 38.85 |
| ಟೊಮ್ಯಾಟೋ | 9224 | 715.74 |
| ದೊಣ್ಣೆ ಮೆಣಸಿನಕಾಯಿ | 414 | 31.12 |
| ಬೂದುಗುಂಬಳ ಕಾಯಿ | 60 | 5.40 |
| ಮೆಣಸಿನಕಾಯಿ | 4892 | 371.56 |
| ಹೂಕೋಸು | 784 | 57.67 |
| ಒಟ್ಟು | **35819** | **3103.67** |

## ಅನುಬಂಧ-3 C- ಹಣ್ಣಿನ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮ

| ಬೆಳೆ | ಫಲಾನುಭವಿಗಳ ಸಂಖ್ಯೆ | ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| ಅಂಜೂರ | 535 | 64.19 |
| ಅನಾನಸ್ | 1021 | 94.23 |
| ಕರಬೂಜ | 243 | 27.29 |
| ಕಲ್ಲಂಗಡಿ | 1634 | 154.48 |
| ದ್ರಾಕ್ಷಿ | 2865 | 242.78 |
| ನೀಲಿ ದ್ರಾಕ್ಷಿ | 316 | 29.18 |
| ಪಪಾಯ | 1799 | 173.11 |
| ಬಾಳೆ | 27166 | 1836.83 |
| ಬೀಜರಹಿತ ದ್ರಾಕ್ಷಿ | 380 | 33.16 |
| ಒಟ್ಟು | **35959** | **2655.24** |